# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343

ಇ-ಮೇಲ್ ವಿಳಾಸ : director.ahr.kptcl@gmail.com


---

**ವಿಷಯ:** ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆಯು ಮೈಸೂರಿನಲ್ಲಿ ನಿರ್ಮಿಸುತ್ತಿರುವ ಡಾ: ಭೀಮರಾವ್ ಪ್ಯಾಲೇಸ್‌ನ ಕಟ್ಟಡದ ಕಾಮಗಾರಿಗೆ ನಿಗಮದ ವತಿಯಿಂದ ಆರ್ಥಿಕ ಸಹಾಯವನ್ನು ಕೋರಿರುವ ಕುರಿತು.

**ಉಲ್ಲೇಖ:**
1. ಕವಿಪ್ರನಿನಿ/ಬಿ7/3654/93-94 ದಿನಾಂಕ 09/11/2015.
2. ಕವಿಪ್ರನಿನಿ/ಬಿ7/3653/93-94 ದಿನಾಂಕ 13/07/2021.
3. ಪ್ರಧಾನ ಕಾರ್ಯದರ್ಶಿ, ಕವಿಮಂ ಪ.ಜಾ/ಪ.ವ ಕಲ್ಯಾಣ ಸಂಸ್ಥೆ, ಕೇಂದ್ರ ಸಮಿತಿ ರವರ ಪತ್ರ ಸಂಖ್ಯೆ ಕವಿಮಂ:ಪ.ಜಾ/ಪವ:ಕಸಂ/ಕೇಂ.ಸ/2023-24/683 ದಿನಾಂಕ 13/09/2023.

**ಪೀಠಿಕೆ:**

1. ಮೈಸೂರು – ಹುಣಸೂರು ರಸ್ತೆಯಲ್ಲಿನ 220ಕೆ.ವಿ. ಹೂಟಗಳ್ಳಿ ವಿದ್ಯುತ್ ಉಪಕೇಂದ್ರದ ಕಾಲೋನಿಯ ಪ್ರವೇಶ ದ್ವಾರದ ಬಳಿಯಿರುವ 100 ಅಡಿ X (220+171/2) ಅಡಿ ಜಾಗವನ್ನು ಕ.ವಿ.ಮಂ. ಪ.ಜಾ / ಪ.ವ ಕಲ್ಯಾಣ ಸಂಸ್ಥೆಯ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕಾಗಿ ಉಲ್ಲೇಖ (2) ರನ್ವಯ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಅನುಮೋದನೆ ನೀಡಲಾಗಿದೆ.
2. ಪ್ರಸ್ತುತ, ಸದರಿ ಜಾಗದಲ್ಲಿ ಕ.ವಿ.ಮಂ. ಪ.ಜಾ / ಪ.ವ ಕಲ್ಯಾಣ ಸಂಸ್ಥೆಯ ವತಿಯಿಂದ ಡಾ: ಭೀಮ್‌ರಾವ್ ಪ್ಯಾಲೇಸ್‌ನ ಕಟ್ಟಡ ಕಾಮಗಾರಿ ಪ್ರಾರಂಭಗೊಂಡಿದ್ದು, ಸದರಿ ಕಟ್ಟಡವನ್ನು ಪೂರ್ಣಗೊಳಿಸಲು ಹಣದ ಕೊರತೆ ಇರುವುದರಿಂದ ಕಲ್ಯಾಣ ಸಂಸ್ಥೆಯ ಹಾಗೂ ನೌಕರರ ಹಿತದೃಷ್ಟಿಯಿಂದ ಕವಿಪ್ರನಿನಿ ಪರವಾಗಿ ಅನುದಾನದ ಮೂಲಕ ರೂ. 3 ಕೋಟಿ ಸಹಾಯಧನವನ್ನು ನೀಡುವಂತೆ ಕೋರಿ ಪ್ರಧಾನ ಕಾರ್ಯದರ್ಶಿಗಳು, ಕ.ವಿ.ಮಂ. ಪ.ಜಾ / ಪ.ವ. ಕಲ್ಯಾಣ ಸಂಸ್ಥೆ, ಕೇಂದ್ರ ಸಮಿತಿ, ಬೆಂಗಳೂರು ರವರು ಉಲ್ಲೇಖ (3) ರ ಪತ್ರದಲ್ಲಿ ಮನವಿ ಸಲ್ಲಿಸಿರುತ್ತಾರೆ.
3. ಈ ಸಂಬಂಧ, ದಿನಾಂಕ 10.01.2024 ರಂದು ಜರುಗಿದ 143ನೇ ಕವಿಪ್ರನಿನಿ ಮಂಡಳಿಯ ನಿರ್ದೇಶಕರ ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸಿ, ರೂ.25.00 ಲಕ್ಷಗಳು (ರೂ. ಇಪ್ಪತ್ತೈದು ಲಕ್ಷಗಳು ಮಾತ್ರ) ಅನುದಾನ ಬಿಡುಗಡೆಗೊಳಿಸಲು ಅನುಮೋದಿಸಿಲಾಗಿರುತ್ತದೆ.
4. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ ಆದೇಶ ಸಂಖ್ಯೆ: KPTCL/GMT/CIVL(B7)/96/2023-MANAGER ESTATE (E-79400)**
**ದಿನಾಂಕ : 02.02.2024**

ದಿನಾಂಕ 10.01.2024 ರ 143ನೇ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ನಿರ್ಣಯಿಸಿದಂತೆ ಮೈಸೂರು – ಹುಣಸೂರು ರಸ್ತೆಯಲ್ಲಿನ 220ಕೆ.ವಿ. ಹೂಟಗಳ್ಳಿ ವಿದ್ಯುತ್ ಉಪಕೇಂದ್ರದ ಕಾಲೋನಿಯ ಪ್ರವೇಶದ್ವಾರದ ಬಳಿ ಕವಿಮಂ ಪ.ಜಾ / ಪ.ವ ಕಲ್ಯಾಣ ಸಂಸ್ಥೆಯ ವತಿಯಿಂದ ನಿರ್ಮಿಸುತ್ತಿರುವ ಡಾ: ಭೀಮರಾವ್ ಪ್ಯಾಲೇಸ್‌ನ ಕಟ್ಟಡ ಕಾಮಗಾರಿಗೆ ರೂ.25.00 ಲಕ್ಷಗಳು (ರೂ. ಇಪ್ಪತ್ತೈದು ಲಕ್ಷಗಳು ಮಾತ್ರ) ಅನುದಾನವನ್ನಾಗಿ ಮುಂದೆ ಹೇಳಿರುವ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಆದೇಶಿಸಿದೆ.

1. ಮಂಜೂರು ಮಾಡಿರುವ ಸಹಾಯಧನವನ್ನು ಡಾ: ಭೀಮರಾವ್ ಪ್ಯಾಲೇಸ್‌ನ ಕಟ್ಟಡ ಕಾಮಗಾರಿಯ ಉದ್ದೇಶಕ್ಕೆ ಮಾತ್ರ ಬಳಸುವುದು.
2. ಅನುಮೋದಿಸಿದ ಮೊತ್ತವನ್ನು ಬಳಕೆ ಮಾಡಿರುವುದಕ್ಕೆ, ವಿವರಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸಿ ವರದಿಯನ್ನು ನೀಡುವುದು.
3. ಡಾ: ಭೀಮರಾವ್ ಪ್ಯಾಲೇಸ್ (ಸಮುದಾಯ ಭವನ) ವನ್ನು ಕವಿಪ್ರನಿನಿಯ ಅಧಿಕೃತ ಚಟುವಟಿಕೆಗೆ ಅವಶ್ಯಕತೆಯಿದ್ದಲ್ಲಿ ಉಚಿತವಾಗಿ ನೀಡತಕ್ಕದ್ದು.

(ಆದೇಶದ ಮೇರೆಗೆ)

ನಿರ್ದೇಶಕರು (ಆ ಮತ್ತು ಮಾ.ಸಂ),
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು :**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರುಗಳು, ಬೆವಿಕಂ / ಚಾ.ವಿ.ಸ.ಕಂ/ ಮೆಸ್ಕಾಂ / ಹೆಸ್ಕಾಂ / ಜೆಸ್ಕಾಂ/ ಪಿ.ಸಿ.ಕೆ.ಎಲ್.
2. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
4. ಕಂಪನಿ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್ (ವಿ) (ಐ.ಟಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ಅಂತರ್ಜಾಲದಲ್ಲಿ ಪ್ರಕಟಿಸಲು.
6. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು) / ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳಿಗೆ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಗಳು ಮಾಹಿತಿಗಾಗಿ:**

1. ಶ್ರೀ ಆರ್. ಹೆಚ್. ಲಕ್ಷ್ಮೀಪತಿ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ, ಬೆಂಗಳೂರು ಹಾಗೂ ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು
2. ಶ್ರೀ ಕೆ. ಶಿವಣ್ಣ, ಅಧ್ಯಕ್ಷರು, ಕೆ.ಇ.ಬಿ. ಇಂಜಿನಿಯರ್ಸ್ ಅಸೋಸಿಯೇಷನ್, ಬೆಂಗಳೂರು ಹಾಗೂ ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ನೋಂದಣಿ ಸಂಖ್ಯೆ: 659, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಆನಂದರಾವ್ ವೃತ್ತ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಪ.ಜಾ / ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಡಿಪ್ಲೊಮ ಇಂಜಿನಿಯರ್‌ಗಳ ಸಂಘ, ಕೆ.ಆರ್. ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ / ಎಸ್ಕಾಂಗಳ ಎಸ್.ಸಿ / ಎಸ್.ಟಿ ಅಧಿಕಾರಿಗಳ ಸಂಘ, ಬೆಂಗಳೂರು.